**ಕರ್ನಾಟಕ ಸರ್ಕಾರ**
**ತಾಂತ್ರಿಕ ಶಿಕ್ಷಣ ಇಲಾಖೆ**

ಸಂಖ್ಯೆ: DTE-ADMI0EST(10)/56/2024

ಆಯುಕ್ತರವರ ಕಛೇರಿ
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ
ಅರಮನೆ ರಸ್ತೆ, ಬೆಂಗಳೂರು.
ದಿನಾಂಕ:28-04-2025

**ಸುತ್ತೋಲೆ**

ವಿಷಯ: ತಾಂತ್ರಿಕ ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿನ ಸರ್ಕಾರಿ ಇಂಜಿನಿಯರಿಂಗ್ / ಪಾಲಿಟೆಕ್ನಿಕ್ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧ್ಯಾಪಕರು / ಉಪನ್ಯಾಸಕರುಗಳಿಗೆ 7ನೇ ಎಐಸಿಟಿಇ ವೇತನ ಶ್ರೇಣಿಯಲ್ಲಿ ಪದೋನ್ನತಿ ನೀಡುವ ಬಗ್ಗೆ.

ಉಲ್ಲೇಖ: ಸರ್ಕಾರದ ಪತ್ರ ಸಂಖ್ಯೆ ಇಡಿ /86 / ಡಿಟಿಇ / 2023 ದಿನಾಂಕ 25-04-2025.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖದ ಪತ್ರದಲ್ಲಿ ಸರ್ಕಾರಿ ಇಂಜಿನಿಯರಿಂಗ್ / ಪಾಲಿಟೆಕ್ನಿಕ್ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧ್ಯಾಪಕರು / ಉಪನ್ಯಾಸಕರುಗಳಿಗೆ 7ನೇ ಎಐಸಿಟಿಇ ವೇತನ ಶ್ರೇಣಿಯಡಿ ಪದೋನ್ನತಿ ನೀಡುವ ಪ್ರತ್ಯೇಕ ಸ್ಥಾನೀಕರಣ ಸಮಿತಿಯನ್ನು ರಚಿಸುವ ಅಧಿಕಾರವನ್ನು ಆಯುಕ್ತರು ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆಗೆ ಪ್ರತ್ಯಾಯೋಜಿಸಿ ಅರ್ಹ ಅಧ್ಯಾಪಕ ವರ್ಗದವರಿಗೆ ಪದೋನ್ನತಿ ನೀಡುವ ಕುರಿತು ಸೂಕ್ತ ಶಿಫಾರಸ್ಸಿನೊಂದಿಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವಂತೆ ನಿರ್ದೇಶಿಸಲಾಗಿರುತ್ತದೆ.

ಈ ಹಿನ್ನಲೆಯಲ್ಲಿ ಸರ್ಕಾರಿ ಇಂಜಿನಿಯರಿಂಗ್ / ಪಾಲಿಟೆಕ್ನಿಕ್ ಕಾಲೇಜುಗಳಲ್ಲಿ ಪೂರ್ಣಕಾಲಿಕ ನೆಲೆಯಲ್ಲಿ ಸೇವೆಗೆ ಸೇರಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಅಧ್ಯಾಪಕರು / ಉಪನ್ಯಾಸಕರುಗಳಿಗೆ 7ನೇ ಎಐಸಿಟಿಇ ವೇತನ ಶ್ರೇಣಿ ಅಧಿನಿಯಮ 2019 ಮತ್ತು 2020 ಸ್ಪಷ್ಟೀಕರಣ/ಸುತ್ತೋಲೆ ಹಾಗೂ ಎಐಸಿಟಿಇ ರವರು ಕಾಲಕಾಲಕ್ಕೆ ಹೊರಡಿಸಿರುವ ಆದೇಶಗಳ ಅನ್ವಯ ಪದೋನ್ನತಿ ಪಡೆಯಲು ಅರ್ಹರಿರುವ ಎಲ್ಲಾ ಅಧ್ಯಾಪಕ / ಉಪನ್ಯಾಸಕರ ವೃಂದದವರಿಂದ ಪ್ರಾಂಶುಪಾಲರುಗಳು ಪ್ರಸ್ತಾವನೆಗಳನ್ನು ಪಡೆದು ನಿಯಮಾನುಸಾರ ಪ್ರಾಥಮಿಕ ಹಂತದ ಪರಿಶೀಲನೆ ಮಾಡಿ ಸ್ಥಾನೀಕರಣ ಸಮಿತಿ (screening cum evaluation/selection committee) ಮುಂದೆ ಆಯುಕ್ತಾಲಯವು ಸೂಚಿಸುವ ದಿನಾಂಕದಂದು ಸಂಬಂಧಿತ ವಿಭಾಗದ ವಿಭಾಗಾಧಿಕಾರಿಗಳೊಂದಿಗೆ ಪ್ರಾಂಶುಪಾಲರು ಪ್ರಸ್ತಾವನೆಗಳೊಂದಿಗೆ ಹಾಜರಾಗುವಂತೆ ಈ ಮೂಲಕ ಸೂಚಿಸಲಾಗಿದೆ.

Manjunath

**ಆಯುಕ್ತರು**
**ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ**

ಇವರಿಗೆ

ಎಲ್ಲಾ ಸರ್ಕಾರಿ ಇಂಜಿನಿಯರಿಂಗ್ / ಪಾಲಿಟೆಕ್ನಿಕ್ ಕಾಲೇಜುಗಳ ಪ್ರಾಂಶುಪಾಲರುಗಳ ಮಾಹಿತಿಗಾಗಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ.

ಪ್ರತಿ:

1. ಆಯುಕ್ತರವರ ಆಪ್ತ ಶಾಖೆ-ಮಾಹಿತಿಗಾಗಿ.
2. ನಿರ್ದೇಶಕರವರ ಆಪ್ತ ಶಾಖೆ-ಮಾಹಿತಿಗಾಗಿ.
3. ಜಂಟಿ ನಿರ್ದೇಶಕರ (ಆಡಳಿತ) ಇವರ ಆಪ್ತ ಶಾಖೆ-ಮಾಹಿತಿಗಾಗಿ.
4. ಜಂಟಿ ನಿರ್ದೇಶಕರ (ಪರೀಕ್ಷೆ)/(ಸಿಡಿಸಿ) ಇವರ ಆಪ್ತ ಶಾಖೆ-ಮಾಹಿತಿಗಾಗಿ.
5. ಸಂಯೋಜಕರು ಈ ಆಡಳಿತ ವಿಭಾಗ ಇಲಾಖಾ ಜಾಲತಾಣದಲ್ಲಿ ಪ್ರಕಟಿಸಲು
6. ಕಚೇರಿ ಪ್ರತಿ